**ಭತ್ತ ಮತ್ತು ರಾಗಿಯ ಮೆದೆಗೆ ಬೆಂಕಿ ಬಿದ್ದಿರುವುದಕ್ಕೆ ಪರಿಹಾರ**

**687 (836) ಶ್ರೀ ರುದ್ದೇಶ್‌ಗೌಡ ವೈ.ಎನ್ (ಬೇಲೂರು) :** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ರೈತರ ಭತ್ತದ ಮತ್ತು ರಾಗಿಯ ಮೆದೆಗೆ ಆಕಸ್ಮಿಕವಾಗಿ ಬೆಂಕಿ ಬಿದ್ದು ಸುಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಬಂದಿದ್ದಲ್ಲಿ, (ಈ ನತದೃಷ್ಟ ರೈತರಿಗೆ) ಪರಿಹಾರ ನೀಡಲು ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)?

**ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :**

ಅ) ಬಂದಿದೆ.

ಆ) ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಅರೆಹಳ್ಳಿ ಹೋಬಳಿ, ಕಣದೂರು ಗ್ರಾಮದ ಸಗನಯ್ಯ ಬಿನ್ ರಂಗಯ್ಯ ಅವರು ಶೇಖರಿಸಿಟ್ಟಿದ್ದ ಹುಲ್ಲು ಬಣವೆಗೆ ದಿನಾಂಕ: 01–03–2010 ರಂದು ಬೆಂಕಿ ಬಿದ್ದು ನಷ್ಟದ ಬಗ್ಗೆ ಪರಿಹಾರ ಮಂಜೂರಾತಿಗೆ ತಾಲ್ಲೂಕು ಕಛೇರಿಗೆ ಅರ್ಜಿ ಸಲ್ಲಿಸಿದ್ದು, ಸಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಹುಲ್ಲಿನ ಬಣವೆಗೆ ಬೆಂಕಿ ಬಿದ್ದು ನಷ್ಟವಾದಲ್ಲಿ ಪರಿಹಾರ ಮಂಜೂರಾತಿಗೆ ಅವಕಾಶವಿಲ್ಲದೇ ಇರುವುದರಿಂದ ತಹಶೀಲ್ದಾರ್ ಬೇಲೂರುರವರು ಅರ್ಜಿದಾರರಿಗೆ ಹಿಂಬರಹ ನೀಡಿರುತ್ತಾರೆ.

ಪ್ರಕೃತಿ ವಿಕೋಪ ಪರಿಹಾರ ಅಡಿಯಲ್ಲಿ ಬಣವೇ ಸುಟ್ಟಿದ್ದಕ್ಕೆ ಪರಿಹಾರ ನೀಡಲು ಸಿಆರ್‌ಎಫ್/ಎನ್‌ಸಿಸಿಎಫ್ ಮಾರ್ಗಸೂಚಿ ಅಡಿಯಲ್ಲಿ ಅವಕಾಶ ಕಲ್ಪಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ದಿನಾಂಕ: 07–11–2009 ರಂದು ಮನವಿ ಮಾಡಿಕೊಳ್ಳಲಾಗಿದೆ. ಇದುವರೆಗೂ ಕೇಂದ್ರದಿಂದ ಉತ್ತರ ಬಂದಿರುವುದಿಲ್ಲ.

**ಆಮ್ ಆದ್ಮಿ ಭೀಮಾ ಯೋಜನೆ ಬಗ್ಗೆ**

**693 (1218) ಶ್ರೀ ಶಿವಕುಮಾರ್ ಡಿ.ಕೆ. (ಕನಕಪುರ) :** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಮ್ ಆದ್ಮಿ (ಜನಶ್ರೀ ವಿಮಾ ಯೋಜನೆ) ವಿಮಾ ಯೋಜನೆಯಡಿಯಲ್ಲಿ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳನ್ನು ಸರ್ವೆ ಮಾಡಲಾಗಿದೆ (ವಿವರ ನೀಡುವುದು);